

# ಹದ್ದು ಮೀರಿದ ಹದ್ದು!

ಇದು ಶಿಕಾರಿಗೆ ಹೊರಟ ಹದ್ದು. ತನ್ನ ಹದ್ದು ಮೀರಿ, ಮನುಷ್ಯರಂತೆ ಆಯುಧ ಹಿಡಿದು ಬೇಟೆಗೆ ಸಿದ್ಧವಾಗಿದೆ! ಎಷ್ಟು ವಿಚಿತ್ರ ಅಲ್ಲವೇ? ಜಗತ್ತಿನ ಯಾವ ಪಕ್ಷಿ, ಪ್ರಾಣಿಯೂ ಮನುಷ್ಯರಂತೆ ಬಡಿಗೆ, ಭರ್ಚಿ,ಕತ್ತಿ ಹಿಡಿದು ಬೇಟೆಯಾಡುವುದಿಲ್ಲ. ಅವು ತಮ್ಮ ದೇಹದಲ್ಲೇ ಇರುವ ಪಂಜು, ಚುಂಚು, ಹಲ್ಲು.. ಮುಂತಾದವುಗಳಿಂದಲೇ ಬೇಟೆ ಆಡುತ್ತವೆ. ಹಿಂದಿನ ಜನ್ಮದಲ್ಲಿ ಈ ಹದ್ದು ಮನುಷ್ಯನಾಗಿ ಹುಟ್ಟಿತ್ತೋ ಏನೋ?!
–ಹೀಗೆಲ್ಲ ಆಲೋಚಿಸುತ್ತಿದ್ದೀರಾ? ಸ್ವಲ್ಪ ನಿಲ್ಲಿ. ನೀವು ಈ ರೀತಿ ಆಲೋಚಿಸಿದ್ದರೆ ಅದು ಖಂಡಿತಾ ತಪ್ಪು!

ಇದು ಚಾಕು ಹಿಡಿದು ಬೇಟೆಗೆ ಹೊರಟ ಹದ್ದು ಅಲ್ಲ. ಬಹುಶಃ ಈ ಹದ್ದು, ಚಾಕುವಿನ ಕೆಂಪು ಹಿಡಿಕೆಯನ್ನು ನೋಡಿ, ಅದು ತನ್ನ ಆಹಾರ ಇರಬಹುದೇನೋ ಎಂದು ಯೋಚಿಸಿ ಎತ್ತಿಕೊಂಡಿರಬೇಕು. ಹೀಗೆ ಚಾಕುವಿನೊಂದಿಗೆ ಅದು ಹಾರುವಾಗ, ಡಚ್ ಛಾಯಾಗ್ರಾಹಕ ಹ್ಯಾನ್ ಬೌಮಿಸ್ಟರ್, ತನ್ನ ಕ್ಯಾಮೆರಾದಲ್ಲಿ ಈ ಅಪರೂಪದ ದೃಶ್ಯವನ್ನು ವಿವಿಧ ಕೋನಗಳಿಂದ ಸೆರೆ ಹಿಡಿದಿದ್ದಾನೆ. ಆತ ಈ ದೃಶ್ಯವನ್ನು ನೋಡುತ್ತಿರುವಾಗಲೇ, ಆ ಹದ್ದಿಗೆ ತಾನು ಹಿಡಿದದ್ದು ತನ್ನ ಆಹಾರವಲ್ಲ ಎಂಬುದು ತಿಳಿದಿದೆ! ಕೂಡಲೇ ಅದು ಚಾಕುವನ್ನು ಎಸೆದು ಬಿಟ್ಟಿದೆ. ಏನೇ ಆದರೂ ವಂಡರ್ ಫೋಟೋ ಅನ್ನುವುದಂತೂ ನಿಜ.

■ ಸುಭಾಸ ಯಾದವಾಡ

